ಶ್ರೀ ಜಿ. ರಾಜುಗೌಡ.—ರಾಜ್ಯದ ೧೯ ಜಿಲ್ಲೆಗಳ ಪೈಕಿ ಮೈಸೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಎಂದರೆ ೧೦,೧೩೧ ಜನ ಕುಷ್ಟರೋಗಿಗಳಿದ್ದಾರೆ. ಅದರಲ್ಲೂ ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕಿನಲ್ಲೇ ೫ ಸಾವಿರ ಜನರು ಇದ್ದಾರೆ.

ಅಧ್ಯಕ್ಷರು.—ಗುಂಡ್ಲುಪೇಟೆಯಲ್ಲೂ ಇದ್ದಾರೆ.

ಶ್ರೀ ಜಿ. ರಾಜುಗೌಡ.—ಗುಂಡ್ಲುಪೇಟೆಯಲ್ಲೂ ಸ್ವಲ್ಪ ಜನ ಇದ್ದಾರೆ. ಆದರೆ ಹೆಚ್ಚು ಎಲ್ಲಿ ಇದ್ದಾರೆ ಎಂದು ಹೇಳುತ್ತಿದ್ದೇನೆ. ಮೈಸೂರು ಜಿಲ್ಲೆಯಲ್ಲೇ ಶೇಕಡಾ ೫೦ರಷ್ಟು ಜನ ಈ ಎರಡು ತಾಲ್ಲೂಕಿನಲ್ಲಿ ಇದ್ದಾರೆಂದು ತಮ್ಮ ಅಂಕಿಅಂಶದಿಂದ ಗೊತ್ತಾಗುತ್ತದೆ. ಆದ್ದರಿಂದ ನಾನು ಕೇಳಿ ಕೊಳ್ಳುವುದು ಇಷ್ಟೇ. ಕೊಳ್ಳೇಗಾಲ ತಾಲ್ಲೂಕಿನ ಹೊರ ವಲಯದಲ್ಲಿ ಎಂದರೆ ಬಯಲು ಪ್ರದೇಶದಲ್ಲಿ ತಾವು ಕುಷ್ಟ ರೋಗ ನಿಯಂತ್ರಣ ಕೇಂದ್ರವನ್ನು ಸ್ಥಾಪನೆ ಮಾಡಿ, ಆ ರೋಗಿಗಳಿಗೆ ಪುನರ್ವ್ಯವಸ್ಥೆ ಕಲ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಯೋಚನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್. ಯೋಚನೆ ಮಾಡುತ್ತೇನೆಂದರೆ ಆಗುವುದಿಲ್ಲ. ಇವತ್ತು ನಿಮ್ಮ ಮೇಲೆ ಗುರುತರವಾದ ಜವಾಬ್ದಾರಿ ಇದೆ. ೧೦ ಸಾವಿರ ಮಂದಿ. ಈ ಜಿಲ್ಲೆಯಲ್ಲಿ ಇದ್ದು, ಅದರಲ್ಲಿ ಶೇಕಡ ೫೦ ರಷ್ಟು ಜನ ಈ ಮೂರೂ ತಾಲ್ಲೂಕುಗಳಲ್ಲಿ ಇದ್ದಾರೆ. ಗುಂಡ್ಲೂಪೇಟೆ, ಚಾಮರಾಜನಗರ ಹಾಗೂ ಕೊಳ್ಳೇಗಾಲದಲ್ಲಿ ಇದ್ದಾರೆ. ಈ ಮೂರೂ ತಾಲ್ಲೂಕಿಗೆ ಸೇರಿಸಿ ಒಂದು ವ್ಯವಸ್ಥೆ ಮಾಡಿ. ಕೊಳ್ಳೇಗಾಲದಿಂದ ಅಲ್ಲಿಗೆ ೩೦ ಕಿ. ಮೀಟರ್, ಗುಂಡ್ಲೂ ಪೇಟೆಯಿಂದಲೂ ಅಲ್ಲಿಗೆ ೩೦ ಕಿ. ಮೀ. ಆಗುತ್ತದೆ. ಆದುದರಿಂದ ಈ ಮೂರೂ ತಾಲ್ಲೂಕಿಗೂ ಹೊಂದಿಕೊಳ್ಳುವಂತಹ ಒಂದು ವ್ಯವಸ್ಥಿತವಾದ ಆಸ್ಪತ್ರೆಯನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀಮತಿ ಮನೋರಮ ಮಧ್ವರಾಜ್.—ಈ ಮೂರೂ ತಾಲ್ಲೂಕುಗಳ ಮಧ್ಯೆ ಒಂದು ಆಸ್ಪತ್ರೆಯನ್ನು ಪ್ರಾರಂಭ ಮಾಡುತ್ತೇವೆ.

ಮಾಫಿ ಲೈಸನ್ಸ್ ಹೋಲ್ಡರ್ಸ್ ಚುಕ್ಕಿ ಗುರುತಿನ ಪ್ರಶ್ನೆ

೫೩೪ (೧೫೩೦ಎ) ಶ್ರೀ ಎಂ. ಪಿ. ವೆಂಕಟೇಶ (ಹೆಗ್ಗಡದೇವನಕೋಟೆ).—ಮಾನ್ಯ ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮಾಫಿ ಲೈಸನ್ಸ್ ಹೋಲ್ಡರ್ ಎಂದರೇನು ?

ಆ) ಅರಣ್ಯ ಇಲಾಖೆಯವರು ಮಾಫಿ ಪಾಸ್ ಲೈಸನ್ಸ್ ಯಾರಿಗೆ ನೀಡುತ್ತಾರೆ ?

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನೆ ಮತ್ತು ಅರಣ್ಯ ಸಚಿವರು).—

ಅ) ಇನಾಂ ಭೂಮಿ ಸ್ವಂತ ಹಿಡುವಳಿ ಜಮೀನು ಕಾಫಿತೋಟವನ್ನೊಳಗೊಂಡಂತೆ ಖಾಸಗಿ ಭೂಮಿಯಲ್ಲಿನ ಮರಮಟ್ಟು ಮತ್ತು ಸೌದೆ ಮುಂತಾದ ಉತ್ಪನ್ನಗಳನ್ನು ತೆಗೆಯಲು ನೀಡುವ ಪರವಾನಿಗೆಗೆ ಸಾಮಾನ್ಯವಾಗಿ ಮಾಫಿ ಪಾಸ್ ಎಂದು ಹೇಳಲಾಗುತ್ತದೆ. ಈ ಪರವಾನಿಗೆಯನ್ನು ನಮೂನೆ ೨೮ ರಲ್ಲಿ ಕರ್ನಾಟಕ ಅರಣ್ಯ ಕಾಯಿದೆ ೧೯೬೪, ಕಾಲಂ ೧೪೫(೩)ರ ಪ್ರಕಾರ ನೀಡಲಾಗುತ್ತದೆ. ಕಾನೂನು ರೀತ್ಯ ಯಾರು ಈ ಪರವಾನಿಗೆಯನ್ನು ಅಧಿಕೃತವಾಗಿ ಪಡೆಯುತ್ತಾರೋ ಅವರನ್ನು ಮಾಫಿ ಪಾಸ್ ಹೋಲ್ಡರ್ ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ.

ಆ) ನಮೂನೆ ೨೮ನ್ನು ಜಮೀನಿನ ಯಜಮಾನ ಅಥವಾ ಅನುಭೋಗದಾರ ಅಥವಾ ಅವರಿಂದ ಅಧಿಕಾರ ಹೊಂದಿದ ವ್ಯಕ್ತಿಗೆ ನೀಡಲಾಗುತ್ತದೆ,

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲ ಪ್ರಶ್ನೆಗೆ ಉತ್ತರವಾಗಿ ಕಾನೂನು ಚೌಕಟ್ಟಿನಲ್ಲಿ ಯಾರು ಬೇಕಾದರೂ ತೆಗೆದುಕೊಳ್ಳಬಹುದೆಂದು ಹಾಗೂ ಎರಡನೆಯ ಪ್ರಶ್ನೆಗೆ ಉತ್ತರವಾಗಿ ನಮೂನೆ–೨೮ನ್ನು ಜಮೀನಿನ ಯಜಮಾನ ಅಥವಾ ಅನು ಭೋಗದಾರ ಅಥವಾ ಅವರಿಂದ ಅಧಿಕಾರ ಹೊಂದಿದ ವ್ಯಕ್ತಿಗೆ ನೀಡಲಾಗುತ್ತದೆಂದು ಹೇಳಿದ್ದಾರೆ. ಈ ಮೂಲಕ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ೧೫–೬–೯೦ ರಲ್ಲಿ ನಾನು ಸದನದಲ್ಲಿ ಇಲ್ಲದೇ

ಇದ್ದಾಗ ಮಾನ್ಯ ಅರಣ್ಯ ಸಚಿವರು ಮಾತನಾಡುತ್ತಾ... ಹೆಚ್. ಡಿ. ಕೋಟೆ ತಾಲ್ಲೂಕಿನ ಶಾಸಕರು ಸಹ ಮಾಫಿ ಲೈಸನ್ಸ್ ಹೊಲ್ಡರ್‌ಗಳಲ್ಲಿ. ಒಬ್ಬರು ಎಂದು ಹೇಳಿದ್ದಾರೆ. ಇದು ಮಾನ್ಯ ಅರಣ್ಯ ಸಚಿವರಿಗೆ ಗೊತ್ತಾಗಲಿ ಎಂದು ಉದ್ದೇಶಪೂರ್ವಕವಾಗಿಯೇ ಈ ಪ್ರಶ್ನೆ ಹಾಕಿದೆ ಅಷ್ಟೇ ಹಾಗೂ ಇದು ಈ ಸದನಕ್ಕೂ ಗೊತ್ತಾಗಲಿ ಎಂದು ಪ್ರಶ್ನೆ ಹಾಕಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಆ ಮಾಫಿ ಲೈಸನ್ಸ್ ಕೊಡತಕ್ಕ ನಿಯಮಗಳ ಕಲಮುಗಳ ವಿವರವನ್ನು ಅವರು ಕೇಳಿದ್ದಾರೆ. ಇಂತಿಂತ ಕಲಮಿನಲ್ಲಿ ಹೀಗೆ ಇದೆ ಎಂದು ನಾನು ಉತ್ತರವನ್ನು ಕೊಟ್ಟಿದ್ದೇನೆ. ನಾನು ಇಲ್ಲಿ ಒಂದನ್ನು ವಿವರವಾಗಿ ಹೇಳಬೇಕಾಗುತ್ತದೆ. ಈ ಮಾಫಿ ಲೈಸನ್ಸ್ ಹಾವಳಿ ಕರ್ನಾಟಕ ರಾಜ್ಯದ ಅರಣ್ಯ ಪ್ರದೇಶದಲ್ಲಿ ಜಾಸ್ತಿಯಾಗಿದೆ. ಅವರಿಗೆ ಅರ್ಹತೆ ಉಂಟೋ ಇಲ್ಲವೋ ಅದು ಬೇರೆ ವಿಚಾರ. ಅದರಲ್ಲಿ ಪವರ್ ಆಫ್ ಅಟಾರ್ನಿ ತೆಗೆದುಕೊಂಡು ಪಡೆದಿರುವವರ ಹಾವಳಿ ಯಥೇಚ್ಛವಾಗಿದೆ. ಪವರ್ ಆಫ್ ಅಟಾರ್ನಿ ತೆಗೆದುಕೊಳ್ಳುವಾಗ ಅಲ್ಲಿ ಯಜಮಾನ ನಿಜವಾಗಿ ಇರುತ್ತಾನೋ ಇಲ್ಲವೋ ಎಂದು ನೋಡುವುದಕ್ಕೆ ಹೋಗುವುದಿಲ್ಲ. ಪವರ್ ಆಫ್ ಅಟಾರ್ನಿ ಮೇಲೆ ಮಾಫಿ ಲೈಸನ್ಸ್ ಕೊಡುವ ವ್ಯವಸ್ಥೆ ಸಾರೋದ್ದಾರವಾಗಿ ನಡೆಯುತ್ತಿದೆ. ಆದುದರಿಂದ ಯಾರು ಯಾರು ಪವರ್ ಆಂಫ್ ಅಟಾರ್ನಿ ಕೊಡುತ್ತಾರೆ, ಆ ಬಗ್ಗೆ ಒರಿಜಿನಲ್ ಡಾಕ್ಯುಮೆಂಟ್ಸ್ ಅಂದರೆ ಓನರ್‌ಶಿಪ್ ಡಾಕ್ಯುಮೆಂಟ್ಸ್ ಇಲ್ಲದೆ ಪವರ್ ಆಫ್ ಅಟಾರ್ನಿಗೆ ಇನ್ನು ಮೇಲೆ ಮಾನ್ಯತೆ ಕೊಡುವುದೇ ಇಲ್ಲ. ಎಂ. ಪಿ. ವೆಂಕಟೇಶ್.—ಈ ಬಗ್ಗೆ ನನ್ನ ಕ್ಷೇತ್ರದಲ್ಲಿ ಮಡಿಯೂರು ಗ್ರಾಮದಲ್ಲಿ ೪೦೦ ಎಕರೆ ಜಾಗದಲ್ಲಿ ಕಳೆದ ೪೦ ವರ್ಷಗಳಿಂದ ರೈತರು ಸಾಗುವಳಿ ಮಾಡಿಕೊಂಡು ಬಂದಿದ್ದರು. ಆ ಭಾಗದಲ್ಲಿ ಜಮೀನಿನಲ್ಲಿ ಮರ ಕೂಡಾ ಬೆಳೆದಿತ್ತು. ಆ ಜಾಗ ಫಾರೆಸ್ಟ್‌ಗೆ ಸೇರಿದ ಜಾಗ ಎಂದು ದಾಖಲೆಯಲ್ಲಿ ಇದೆ. ಆದರೆ ಅದು ರೈತರಿಗೆ ಗೊತ್ತಿಲ್ಲದೆ ಕಳೆದ ೪೦ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರು. ಆದರೆ ಕೇರಳ ರಾಜ್ಯದವರು ಈಗ ೨ ವರ್ಷಗಳ ಹಿಂದೆ ಅಲ್ಲಿಗೆ ಬಂದು ಫಾರೆಸ್ಟ್ ಇವರಿಂದ ಬರೆಸಿಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಈಗ ಬರೆದುಕೊಟ್ಟ ಹುಜೂರ್ ಸಕ್ಕೆಟರಿಯವರೂ ಇಲ್ಲ. ಆ ಮಹರಾಜರೂ ಇಲ್ಲ. ಆದರೂ ಆ ದಾಖಲೆಯನ್ನು ತಂದು ಅರಣ್ಯ ಇಲಾಖೆಯ ಲ್ಯಾಂಡ್ ರೆಕಾರ್ಡ್‌ನಲ್ಲಿ ದಾಖಲೆಯನ್ನು ಸೃಷ್ಟಿ ಮಾಡಿ ಮಾಫಿಲೈಸೆನ್ಸ್‌ನ್ನು ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳ ಮರಗಳನ್ನು ಕಡಿದುಕೊಂಡು ಹೋಗಿದ್ದಾರೆ. ಮರ ಕಡಿಯುವುದನ್ನು ನಿಲ್ಲಿಸಿ ಅಂತ ಹೇಳಿ ಇಲ್ಲೇ ನಾನು ಹೋರಾಟ ಮಾಡಿದೆ ಆ ದಿನ ನನಗೆ ಮಾತನಾಡಲು ಅವಕಾಶ ಸಿಕ್ಕಲಿಲ್ಲ. ಕೇರಳ ರಾಜ್ಯದವರು ಮರಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ, ಅದನ್ನು ನಿಲ್ಲಿಸಿ, ಅಂತ ಹೇಳಿದ್ದೇನೆ. ಇದರ ಬಗ್ಗೆ ಡಿ. ಎಫ್. ಓ. ಗೂ ಹೇಳಿದ್ದೇನೆ. ಆ ಬಗ್ಗೆ ಪತ್ರವನ್ನೂ ಕೂಡ ಬರೆದಿದ್ದೇನೆ. ನಾನು ಈ ಬಗ್ಗೆ ಪತ್ರ ಬರೆದ ಮೇಲೆ ೬೩ ಸಾವಿರ ರೂಪಾಯಿಗಳನ್ನು ಅವರಿಂದ ಕಟ್ಟಿಸಿಕೊಂಡಿದ್ದಾರೆ. ಕರಾಬ್ ಜಮೀನಿನಲ್ಲಿ ಮರಗಳನ್ನು ಕಟ್ ಮಾಡ್ತಿರಿ ಎಂಬುದಾಗಿ ನಾನು ಪತ್ರ ಬರೆದ ಮೇಲೆ ಅವರಿಂದ ೬೩ ಸಾವಿರ ರೂಪಾಯಿಗಳನ್ನು ಕಟ್ಟಿಸಿಕೊಂಡಿದ್ದಾರೆ. ಅದು ಆದ ಮೇಲೂ ಸಹ ತಮ್ಮ ಮೂಲಕ ಸರ್ಕಾರಕ್ಕೆ ಪ್ರಶ್ನೆ ಯನ್ನು ಹಾಕಿದ ಮೇಲೂ ಸಹ ಆ ಮರಗಳನ್ನು ಸಾಗಾಣಿಕೆ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ಹಿಂದೆ ಯಾವುದೋ ಕಾಲದಲ್ಲಿ ಮಹರಾಜರಿಂದ ಬರೆಸಿಕೊಂಡಿದ್ದೇವೆಂದು ಹೇಳಿ ೪೦೦ ಎಕರೆಯಲ್ಲಿರುವ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವ ಮರಗಳನ್ನು ಕತ್ತರಿಸಿಕೊಂಡು ಹೋಗಿದ್ದಾರೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ. ಏನು ಮಾಡಬೇಕು ಎಂದು ಹೇಳಿ.

ಶ್ರೀ ಎಂ. ಪಿ. ವೆಂಕಟೇಶ್.—ಹೆಗ್ಗಡ ದೇವನಕೋಟೆ ತಾಲ್ಲೂಕ್ ಮಡಿಯೂರು ಗ್ರಾಮದಲ್ಲಿ ಪವರ್ ಆಫ್ ಅಟಾರ್ನಿ ಹೋಲ್ಡರ್ ಎಂದು ಹೇಳಿ ಕೇರಳದ ಜೋಷ್ ಎಂಬುವವರು ಏನು ಏನು ಮರಗಳನ್ನು ತೆಗೆದುಕೊಂಡು ಹೊಗಿದ್ದಾರೆ, ಅದರ ಬಗ್ಗೆ ತನಿಖೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸರ್ವೇ ಸಾಧಾರಣವಾಗಿ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಪವರ್ ಆಫ್ ಅಟಾರ್ನಿ ಹೋಲ್ಡರ್ಸ್ ಎಂದು ಯಾರು ಇದ್ದಾರೆ, ನಿಜವಾಗಿ ಅವರು ಹಕ್ಕುದಾರರೋ ಅಥವಾ ಇಲ್ಲವೋ ಎಂಬುದನ್ನು ನೋಡದೆಯೇ ಅನುಮತಿ ಕೊಡುತ್ತಿದ್ದರು. ಅದನ್ನು ಖಂಡಿತವಾಗಿ ಇವತ್ತೇ ತನಿಖೆ ಮಾಡಿ ಅದನ್ನು ನಿಲ್ಲಿಸುತ್ತೇನೆ. ಮತ್ತೆ ಯಾರಾದರೂ ತಪ್ಪು ಮಾಡಿದ್ದರೆ, ಅಂತವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ಆರ್. ನಾರಾಯಣ್ ರವರೇ, ನಿಮ್ಮ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ.